ವ್ಯಾಖ್ಯಾನ

ಹಂಗಿಸಿ ಹಂಗಿಸಿ ಎನಗೆ ಹರಿನಾಮ ನಿಲ್ಲಿಸಿದರು

1. **Ref.**: Dr. A.B. Shyamachar's private writings.
2. **Ref.**: Purandara Chintanaa Lahari by Dr.A.B. Shyamachar, published by Sri Srinivasa Utsava Balaga ®, Bengaluru – 560019, page No. 64.

ಶ್ರೀ ಪುರಂದರ ದಾಸರ ಉಗಾಭೋಗದ ಚಿಂತನೆ:

ಚಿಕ್ಕದಾದ, ಚೊಕ್ಕವಾಗಿ ಅರ್ಥಗರ್ಭಿತ, ತತ್ತ್ವಭರಿತವಾದ ಕೃತಿಗಳು ಉಗಾಭೋಗಗಳು. ಹರಿದಾಸರು ಜೀವನವನ್ನು ಸುಗಮವಾಗಿ ಸಾರ್ಥಕವನ್ನಾಗಿಸುವ ರೀತಿಯಲ್ಲಿ ರಚಿಸಿಕೊಟ್ಟರು. ಮನುಷ್ಯನ ಜೀವನದಲ್ಲಿ ಸುಖದುಃಖಗಳು, ಮಾನ-ಅಪಮಾನಗಳು ಸಹಜ. ಇಂತಹ ಪ್ರಸಂಗದಲ್ಲಿ ಸ್ವೀಕರಿಸಿ ಪ್ರತಿಕ್ರಿಯಿಸುವ ವಿಧಾನವನ್ನು ದಾಸರು ತಿಳಿಸಿಕೊಡುವರು.

ಹಂಗಿಸಿ ಹಂಗಿಸಿ ಎನಗೆ ಹರಿನಾಮ ನಿಲ್ಲಿಸಿದರು
ಭಂಗಿಸಿ ಭಂಗಿಸಿ ಎನಗೆ ಬಯಲಾಸೆ ಕೆಡಿಸಿದರು
ಕಂಗೆಡಿಸಿ ಕಂಗೆಡಿಸಿ ಕಾಮಕ್ರೋಧವ ಬಿಡಿಸಿದರು
ಹಿಂದೆ ನಿಂದಿಸಿದವರೇ ಎನ್ನ ಬಂಧುಬಳಗ
ಬಾಯಬಡುಕರಿಂದ ನಾನು ಬದುಕಿದೆನು ಹರಿಯೆ
ಕಾಡಿ ಕಾಡಿ ಕೈವಲ್ಯಕ್ಕೆ ಪಥವಿತ್ತರು
ಕಾಸು ಹುಟ್ಟಿದಂತೆ ಪ್ರಾಯಶ್ಚಿತ್ತ ಮಾಡಿದರು
ಮೀಸಲು ಮಾಡಿದರು ಹರಿಯ ಒಡವೆಯೆಂದು
ಲೇಸು ಕೊಡೋ ನಮ್ಮಪ್ಪ ಪುರಂದರವಿಠಲ ನಿನ್ನ
ದಾಸರ ದಾಸರ ದಾಸನೆಂದೆನಿಸಯ್ಯ ।। - ಶ್ರೀ ಪುರಂದರ ದಾಸರು

ಮನುಷ್ಯ ಸಂಘಜೀವಿ. ಸುತ್ತಮುತ್ತಲಿರುವರು ಎಲ್ಲ ತರಹದ ಜನರು. ದಾಸರು ಇದರ ಚಿತ್ರಣ ಕೊಟ್ಟು ಹೇಗೆ ಪ್ರತಿಕ್ರಿಯಿಸಿ ಯಾವ ರೀತಿ ಸ್ವೀಕರಿಸಿ ಅಧ್ಯಾತ್ಮದ ಕಡೆಗೆ ಮುಖವಾಗಿಸಬೇಕೆಂಬ ಮರ್ಮವನ್ನು ತಿಳಿಸುವರು. ಕೆಲಜನ ಹಂಗಿಸಿ (ಹಿಯಾಳಿಸಿ), ಮನಕೆ ಬೇಸರ ತಂದು, ಹರಿನಾಮಸ್ಮರಣೆಗೆ ದಾರಿ ತೋರಿದರು. ಭಂಗಿಸಿ (ಪರಾಭವಗೊಳಿಸಿ ಅಪಮಾನಿಸಿ) ನನ್ನಲ್ಲಿಯ ಆಶೆ(ಬಯಕೆ)ಯನ್ನು ಇಂಗಿಸಿದರು. ಕಂಗೆಡಿಸಿ (ಗಾಬರಿಪಡಿಸಿ - ಉದ್ವೇಗಗೊಳಿಸಿ) ನನ್ನಲ್ಲಿಯ ಕಾಮಕ್ರೋಧಗಳನ್ನು ಬಿಡಿಸಿದರು. ಹೀಗೆ ದಾಸರು ಬವಣೆಗಳ ಬಿಡಿಸಿ ಸನ್ಮತಿಯ ನೀಡಿ ನಡೆಯುವ ಸತ್ಪಥವ ತೋರಿದರು. ದಾಸರ ಅದ್ಭುತ ಪರಿಕಲ್ಪನೆ ಎಲ್ಲರಿಗೂ ದಾರಿದೀಪವಾಗದಿರದು. ಪರಿಸರ ಹೇಗೇ ಇರಲಿ ನಡುವಳಿಕೆ ಹೀಗಿರಲೆಂಬ ಮರ್ಮವನ್ನು ತಿಳಿಸಿದರು. ಇತರರೂ ನಮ್ಮ ಉದ್ಧಾರಕ್ಕೆ ಕಾರಣರಾಗುವರೆಂದರು. ದಾಸರು ಒಂದುಕಡೆ ಅಂದದ್ದು –

ಬಂದ ಕಷ್ಟಗಳೆಲ್ಲ ತಾಳಿಕೋ ಬಲು ಸಂದೇಹ ಬಂದಲ್ಲಿ ಕೇಳಿಕೋ ।
ನಿಂದಾಸ್ತುತಿಗಳ ತಾಳಿಕೋ ಗೋವಿಂದ ನಮ್ಮವನೆಂದು ಹೇಳಿಕೋ ॥ ಎಂದು.

ಶ್ರೀಕೃಷ್ಣ 'ಪದ್ಮಪತ್ರಮಿವಾಂಭಸಾ' ಎಂದರೆ, ದಾಸರು 'ಇರಬೇಕು ಸಂಸಾರದೊಳಿಲ್ಲಾದಿರ-ಬೇಕು' ಎಂದಿರುವರು. ಮನ ಬಂದಂತೆ ಆಡುವ ಮಾಡುವ ಜನರ ಮಧ್ಯದಲ್ಲಿದ್ದು ನಿಮ್ಮ ಸಾಧನೆಗಳನ್ನು ಪೂರೈಸಲು ಆದೇಶಿಸಿದರು. ಇನ್ನು ಸಮೂಹದಲ್ಲಿ ಮೋಸ-ವಂಚನೆ-ಹಾನಿಪಡಿಸುವವರೂ ಇಲ್ಲದಿಲ್ಲ. ಆದರೂ ಮನಸ್ಸನ್ನು ನಿರುತ್ಸಾಹವನ್ನಾಗಿಸದೇ ಸಾಧನೆಯತ್ತ ಸಾಗಿರೆಂದರು. ಅದಕ್ಕೆ ದಾಸರು ಹೇಳಿದ ಮಾತು –

ಅಪರೂಪ ಹರಿನಾಮ ಜಪಿಸುವ ಮನುಜಗೆ
ಅಪಮಾನವಾದರೆ ಒಳಿತು । ಎಂಬುದಾಗಿ.

ಸಮಾಜದಲ್ಲಿ ಮೀಸಲು (ಪ್ರತ್ಯೇಕತೆ) ಮಾಡಿದರೂ, ಹರಿಯ ವಸ್ತುವಾಗಿರುವೆನೆಂದು ಮೂದಲಿಸಿದರೂ ಯೋಚಿಸದಿರಿ ಎನ್ನುವರು. ಏಕೆಂದರೆ, 'ಅಪಮಾನಾತ್ತಪೋವೃದ್ಧಿಃ ಸಮ್ಮಾನಾಚ್ಚ ತಪಃಕ್ಷಯಃ ।' ಎಂಬುದಾಗಿದೆ. ಇದನ್ನೇ ದಾಸರು ಒಂದು ಕಡೆ ಅಂದದ್ದು –

ಅಪಮಾನದಿಂದಲಿ ತಪವೃದ್ಧಿಯಾಗುವುದು
ಅಪಮಾನದಿಂದಲಿ ಪುಣ್ಯಫಲವಾಗುವುದು।
ಅಪಮಾನದಿಂದಲಿ ನೃಪಧ್ರುವರಾಯಗೆ
ಕಪಟನಾಟಕ ಕೃಷ್ಣ ಅಪರೋಕ್ಷನಾದ ।। - ಶ್ರೀ ಪುರಂದರ ದಾಸರು.

ದಾಸರು 'ಸಾಧನಶರೀರವಿದು, ನೀ ದಯದಿ ಕೊಟ್ಟದ್ದು, ಸಾಧಾರಣವಲ್ಲ' ಎಂದದ್ದನ್ನು ಸಾರ್ಥಕಪಡಿಸಿಕೊಳ್ಳಲು ದಾಸರು ಸೂಚಿಸಿದ ಮಾರ್ಗದ ಅವಲಂಬನೆ ಅನಿವಾರ್ಯ. ಅದಕ್ಕೆ ಭಗವಂತನ ಸ್ಮರಣೆ-ಕೀರ್ತನೆ-ಧ್ಯಾನಾದಿಗಳನ್ನು ಬಿಟ್ಟು ಬೇರೇನನ್ನೂ ಬಯಸಬಾರದು.
ಶ್ರೀ ಪುರಂದರ ದಾಸರು 'ದಾಸನ ಮಾಡಿಕೋ ಎನ್ನ ಸ್ವಾಮಿ.....' ಎಂದರು. ಶ್ರೀಕನಕರು 'ದಾಸನಾಗಬೇಕು ಬಿನುಗು ಸಂಸಾರದ ಮಮತೆಯನು ಬಿಡತ' ಎಂದರು. ಭಗವಂತನ ದಾಸನಾಗುವುದೇ ಮಹಾಭಾಗ್ಯ. ಇದನ್ನು ಅವನೇ ಕರುಣಿಸಬೇಕು. ಅದಕ್ಕೆಂದೇ ದಾಸರು ಅಂಗಲಾಚಿ ಬೇಡಿದರು. 'ನಿನ್ನ ದಾಸರ ದಾಸರ ದಾಸನೆಂದೆನಿಸಯ್ಯ' ಎಂದು. ಇಷ್ಟೇ ಅಲ್ಲದೇ ಇವರೇ ಜನುಮದ ಸಾರ್ಥಕ್ಯವನ್ನು ಹೇಳುವಾಗ –

ದಾಸರೊಡನಾಡದವನ ದಾಸರೊಡನೆ ಪಾಡದವನ ।
ದಾಸರ ಕೊಂಡಾಡದೇ ಹರಿ ದಾಸನಾಗದವನ ಜನ್ಮ ।
ವ್ಯರ್ಥವಲ್ಲದೇ ಜನ್ಮ ವ್ಯರ್ಥವಲ್ಲವೇ ।। ಎಂಬುದಾಗಿ.

ಜೀವನದಲ್ಲಿ ಭಗವಂತನ ದಾಸನಾಗದ ಹೊರತು ಏನೇ ಸಾಧನೆಗಳನ್ನು ಪೂರೈಸಲಾಗದು.
ಜಾಣತನದಿಂದ ದಾಸರ ಮಾರ್ಗಾನುವರ್ತಿಯಾಗಿ ಧ್ಯೇಯವನ್ನರಿತು ಮಾನಾಪಮಾನಗಳಿಗೆ ಹಿಗ್ಗದೇ - ಕುಗ್ಗದೇ ಸಮಚಿತ್ತನಾಗಿ ನಡೆಯುವವನಾಗಬೇಕು. ದಾಸರ ಮುತ್ತಿನಂತಹ ಮಾತು - 'ಹೇಸಿಗೆ ಸಂಸಾರದಲ್ಲಿ ಆಶೆಲೇಶ ಮಾಡದ್ಹಾಂಗೆ ಈಸಬೇಕು ಇದ್ದು ಜಯಿಸಬೇಕು ।।'

ಹರಿದಾಸರ ಸಾಹಿತ್ಯದಲ್ಲಿ ಉಗಾಭೋಗಗಳಿಗೆ ವಿಶಿಷ್ಟ ಸ್ಥಾನವಿದೆ. ಇಲ್ಲಿ ಮಿತವಾದ ಮಾತುಗಳಲ್ಲಿ ಅಮಿತವಾದ ಅಂತರಾರ್ಥ ತುಂಬಿದೆ. ಹರಿದಾಸರ ಅನುಭವದ ಮಾತುಗಳಿವು. ಅನುಸರಿಸೆ ಅಮಿತ ಸುಖ. ಶ್ರೀಪುರಂದರದಾಸರ ಈ ಉಗಾಭೋಗದಲ್ಲಿ ನಿಜಾರ್ಥದಲ್ಲಿ ಒಬ್ಬ ಹರಿದಾಸನ ಚಿಂತನೆ

ಹೇಗಿರಬೇಕೆಂಬುದನ್ನು ಪ್ರತಿಬಿಂಬಿಸಿದೆ. ಇದು ಸಾಧನಕೆ ಸೋಪಾನದಂತಿದೆ. ಗುರಿಯನ್ನು ತಲುಪಬಯಸುವ ಸಾಧಕನು ಇತರ ವಿಘ್ನಗಳಿಗೆ, ಅಹಿತಕರ ಮಾತುಗಳಿಗೆ, ಚರ್ಯೆಗೆ ಗಮನಹರಿಸದಿರಿ ಎಂಬ ಕಿವಿ ಮಾತನ್ನು ದಾಸರು ಹೇಳಿರುವರು. ಒಂದು ಕಡೆ ದಾಸರು 'ನಿಂದಕರಿರಬೇಕು' ಎಂದದ್ದು ಈ ಕಾರಣಕ್ಕಾಗಿಯೇ. ಇದರ ಫಲವೋ ಎಂಬಂತೆ ಸರ್ವಾತ್ಮಾನಾ ಶ್ರೀಹರಿಯನ್ನು ನಂಬಿದ ಹರಿದಾಸರು ಇತರರ ಹೊಗಳಿಕೆ–ತೆಗಳಿಕೆಗಳಿಗೆ ಕಿವಿ ಕೊಡರು. ಶ್ರೀಕೃಷ್ಣ ಗೀತೆಯಲ್ಲಿ ಹೇಳಿದ ಸ್ಥಿತಪ್ರಜ್ಞನ ಲಕ್ಷಣಗಳನ್ನು ಇಲ್ಲಿ ಸಾರರೂಪವಾಗಿ ನಿರೂಪಿಸಿರುವುದನ್ನು ಕಾಣಬಹುದು.

ಸಮಾಜದಲ್ಲಿ ಸಹಜವಾಗಿ ಹೀಯಾಳಿಸುವ, ಹಿಂದೆ–ಮುಂದೆ ಆಡಿಕೊಳ್ಳುವ ಜನರೇ ಹೆಚ್ಚು. ಅದರಲ್ಲೂ ಹೆಚ್ಚಾಗಿ ಕಾಣುವುದು ಹತ್ತಿರದ ಬಂಧು–ಬಾಂಧವರಲ್ಲಿ. ಸಾಮಾನ್ಯವಾಗಿ ತಮ್ಮ ಪಾಡಿಗೆ ತಾವಿದ್ದು, ಆಚಾರ–ವಿಚಾರಗಳಲ್ಲಿ ತೊಡಗಿಸಿಕೊಂಡು, ತಮ್ಮ ಸಾಧನೆಗಳನ್ನು ಮಾಡಿಕೊಳ್ಳುತ್ತ ಇತರರನ್ನು ಕಣ್ಣೆತ್ತಿಯೂ ನೋಡದೆ ಇರುವ ಸಜ್ಜನರೂ ತೆಗಳಿಕೆಗೆ ಗುರಿಯಾಗುವುದನ್ನು ಕಾಣುತ್ತಿರುತ್ತೇವೆ. ಅದಕ್ಕೆ ದಾಸರು ಅಂದೇ ಅಂದರು 'ಹೀನ ಬಲ್ಲನೆ ಸುಗುಣ ದುರ್ಗುಣಗಳನು' ಎಂದು. ಸಾಧನೆಗೆ ಅಡ್ಡಿ ಬರುವ ಆತಂಕಗಳನ್ನು ಹೇಗೆ ಸ್ವೀಕರಿಸಿ ತನ್ನ ಸಾಧನೆಗಳನ್ನು ಮುಂದುವರೆಸಬೇಕೆಂಬುದರ ಉಪಾಯವನ್ನು ಇಲ್ಲಿ ತೋರಿರುವರು. ಮಹಾಭಾರತದಲ್ಲಿ ಕುಂತಿಯು ಶ್ರೀಕೃಷ್ಣನನ್ನು ಕೇಳಿದ ಮಾತು **'ವಿಪದಃ ಸಂತು ನಃ ಶಶ್ವತ್ ತತ್ರ ತತ್ರ ಜಗತ್ಪತೇ'** ಕಷ್ಟ ಬರುವುದು, ನಿಂದನೆಗಳಿಗೆ ಒಳಗಾಗುವುದು ಒಳಿತೆನ್ನುವಳು. ಹೀಗಾಗಿ ನಿನ್ನ ನೆನಪು–ಸ್ಮರಣೆ ಬಂದು ಒಳಿತೇ ಆಗುವುದೆನ್ನುವಳು. ಈ ಉದಾತ್ತ ಭಾವನೆ ಬರಬೇಕಾದರೆ ದಾಸರು ಹೇಳಿದಂತೆ 'ನಿಂದಕರಿರಬೇಕು, ಹಂದಿಯಿದ್ದರೆ ಕೇರಿ ಹ್ಯಾಂಗೆ ಶುದ್ಧಿಯೋ ಹಾಂಗೆ' ಎಂದಂತಾಗುತ್ತದೆ. ಇನ್ನೊಂದು ಅರ್ಥದಲ್ಲಿ ನಿಂದಕರು – ಆಡಿಕೊಳ್ಳುವವರಿದ್ದರೆ ತಾನೇ ನಮ್ಮ ಲೋಪ ದೋಷಗಳು ಹೊರಬಿದ್ದು ತಿದ್ದಿಕೊಳ್ಳಲು ಅನುವಾಗುವುದು. ಇದಕ್ಕೆ ಸಂವಾದಿಯಾದ ಶ್ರೀವಾದಿರಾಜರ ಮಾತು ಹೀಗದೆ,

ಹಳಿದು ಹಂಗಿಸುವ ಹಗೆಯ ಮಾತನು ತಾಳು
ಸುಳಿನುಡಿ ಕುಹಕ ಕುತಂತ್ರವನು ತಾಳು
ಅಳುಕದಲೆ ಬಿರುಸು ಬಿಂಕದ ನುಡಿಯ ನೀ ತಾಳು ॥

ಇತರರ ಮಾತುಗಳಿಗೆ, ಕುತಂತ್ರಾದಿಗಳಿಗೆ ನಮ್ಮ ಮನಸ್ಸನ್ನು ಕಲುಷಿತಗೊಳಿಸಿಕೊಳ್ಳದೆ, ಸಂಯಮದಿ ಸಹನೆಯಿಂದ ಎದುರಿಸಬೇಕು. ಅಂದರೆ ಒಂದರ್ಥದಲ್ಲಿ ದಾಸರು ಹೇಳಿದಂತೆ ನಮಗೆ ಉಪಕರಿಸಿರುವರೆಂದು ತಿಳಿದು ಜಿತೇಂದ್ರಿಯರಾಗಬೇಕು.

ಶ್ರೀಕೃಷ್ಣಗೀತೆಯಲ್ಲಿ 'ಕಾಮಾತ್ ಸಂಜಾಯತೇ.....' ಎಂದು ವಿಸ್ತಾರವಾಗಿ ಹೇಳಿದಂತೆ ಮನಸ್ಸಿನಲ್ಲಿ ತುಂಬಿದ ರಾಗದ್ವೇಷಾದಿಗಳೆಂಬ ಹೊಲಸು ಸ್ವಚ್ಛವಾಗಲು ಹಾಗೂ ಶಾಂತಿಯು ನೆಲೆಸಲು ಇಂದ್ರಿಯನಿಗ್ರಹ ಬೇಕು. ಅಂತಃಕರಣ ಶುದ್ಧಿ ಬೇಕು. ಈ ಜಗತ್ತಿನಲ್ಲಿ ನೋಡಿ ನೋಡಧಾಂಗೆ, ತಿಳಿದು ತಿಳಿಯಧಾಂಗೆ ಇರಬೇಕೆಂದರು. ವಿಶೇಷವಾಗಿ ಈ ಯುಗದಲ್ಲಿ ದುಷ್ಟ ಜನರೇ ಬಹಳ ಎಂದಂತೆ ಹಂಗಿಸುವವರು (ಹೀಯಾಳಿಸಿ ಮೂದಲಿಸುವವರು) ಭಂಗಿಸು (ಅವಮಾನಿಸುವ–ಹಿಂಸಿಸುವ)ವವರು ನಮ್ಮೊಂದಿಗಿರುವರು. ಇಂತಹವರನ್ನು ಬಿಟ್ಟಿರಲೂ ಸಾಧ್ಯವಿಲ್ಲ. ದಾಸರು ಮಾರ್ಮಿಕವಾಗಿ 'ಹಿಂದೆ ನಿಂದಿಪರನ್ನು ವಂದಿಸುತಲಿರಬೇಕು' ಎಂದರು. ಹಂಗಿಸಿ–ಭಂಗಿಸುವವರಿಂದ ದುರಾಶೆ ಕಡಿಮೆಯಾಗಿ, ಶ್ರೀಹರಿಯ ಚಿಂತನೆಗೆ ಅನುವಾಗುವುದೆಂದರು. ಇನ್ನೂ ಕೆಲ ಮಹಾನುಭಾವರು ಕೆಂಗೆಡಿಸುವವರು (ಉದ್ರೇಕಕ್ಕೊಳಗಾಗಿಸುವವರು) ಅಂದರೆ ಮನದಲ್ಲಿ ಆಶ್ರಯಿಸಿಕೊಂಡಿರುವ ಕಾಮಕ್ರೋಧಾದಿಗಳನ್ನು ಉಲ್ಬಣಗೊಳಿಸುವವರು. ದಾಸರ ಹಿತವಚನ ತಿಳಿದ ಸಜ್ಜನರು ಇದಕ್ಕೊಳಗಾಗದೆ ಅವರ ಮಾತಾದ 'ಕಲ್ಲಾಗಿ ಇರಬೇಕು ಕಠಿಣಭವ ತೊರೆಯೊಳಗೆ' ಎಂದದ್ದನ್ನು ನೆನಪಿಗೆ ತಂದುಕೊಳ್ಳುವರು. ಪುರಂದರದಾಸರು ನಾವು ನಿತ್ಯ ನೋಡುವ ಕೆಲವರನ್ನು ಜ್ಞಾಪಿಸುವರು. ಅವರು ಬಾಯಿ ಬಡಕರು. ಅಂದರೆ ಮತ್ತೊಬ್ಬರ ಮಾತಿಗೆ ಅವಕಾಶ ನೀಡದೆ ದಬಾಯಿಸುವವರು. ಅಥವಾ ಕೊಚ್ಚಿಕೊಳ್ಳುತ್ತಾ ತಮ್ಮ ದುರಹಂಕಾರವನ್ನು ಪ್ರದರ್ಶಿಸುವವರು. ಇಂತಹವರ ಮನಸ್ಸಿನಲ್ಲಿ ಮಮಕಾರ–ಪ್ರತಿಷ್ಠೆಗಳು ತುಂಬಿರುತ್ತವೆ. ನಮ್ಮ ಸಾಧನೆಗೆ ಇವರ ಕಾಣಿಕೆಯೂ ಇದೆ ಎನ್ನುವರು. ಅಂತಹವರು ಉದ್ಧಾರವಾಗದಿದ್ದರೂ ಶ್ರೀಹರಿಭಕ್ತರು ಅಂತಹವರ ಒಡನಾಟದಿಂದ ವೈರಾಗ್ಯ ತಾಳಲು, ಸದ್ಗತಿಯ ಪಥವನ್ನು ಅರಿತುಕೊಳ್ಳಲು ಸಹಕಾರ ಸಿಕ್ಕಿತೆನ್ನುವ. ಅಲ್ಲದೆ ಅಂತಹವರು ಮೀಸಲು (ಪ್ರತ್ಯೇಕತೆ) ಮಾಡಿ ಅಂದರೆ ಅಪವಿತ್ರರಾಗದಂತೆ ದೂರವಿರಿಸುವರೆಂದರು. ಹೀಗಿದ್ದು ಸಜ್ಜನರಾದ ಹರಿಭಕ್ತರಿಗೆ ಇದು ವರವೇ ಆಗಿದೆ. ಇಂತಹ ಅನುಗ್ರಹ ಲೇಸು (ಹಿತವಾದದ್ದು–ಶುಭ) ಕೊಡೋ ನಮ್ಮಪ್ಪ ಎಂದು ದಾಸರು ಬೇಡಿ ಇತರರಿಗೂ ಮಾರ್ಗದರ್ಶಕರಾದರು.

ಈ ಉಗಾಭೋಗದಲ್ಲಿ ಒಬ್ಬ ಸಾಧಕನು ಜಿತೇಂದ್ರಿಯನಾಗಲು, ಸಂಸಾರದಲ್ಲಿ ಇದ್ದು ಇರದಂತಿರಲು, ಭಗವಂತನ ಕಡೆಗೆ ಮುಖಮಾಡಲು – ಅವನ ಅನುಗ್ರಹಾಕಾಂಕ್ಷಿಯಾಗಲು ಬೇಕಾದ ಯೋಗವನ್ನು ಮಾರ್ಮಿಕವಾಗಿ ತಿಳಿಸಿರುವರು. ಜೀವನದಲ್ಲಾಗುವ ಮಾನಾಪಮಾನ ಜಯಾಪಜಯ, ಲಾಭಾಲಾಭಗಳು ನಾವು ಸ್ವೀಕರಿಸುವ ರೀತಿಯನ್ನು ಅವಲಂಬಿಸಿದೆ. ಎಲ್ಲಕ್ಕೂ ಮಿಗಿಲೆನ್ನುವಂತೆ ದಾಸರ ಕಡೆಯ ಮಾತು ಮನೋಜ್ಞವಾಗಿದೆ. ತಂದೆ ತಾಯಿ ಗುರು ಬಂಧು ಬಳಗ ಎಲ್ಲವೂ ಆದ ಪುರಂದರವಿಠಲನ ಭಕ್ತರ, ಅಂದರೆ ಶುದ್ಧ ಮನಸ್ಕರಾದ ಹರಿದಾಸರ ದಾಸರ ದಾಸರ ದಾಸನನ್ನಾಗಿಸಯ್ಯ ಎಂದು ಬೇಡಿಕೊಳ್ಳುವರು.

ದಾಸರು ನಿರೂಪಿಸಿರುವ ಸಂಗತಿಗಳು ಜೀವನದಲ್ಲಿ ನಿತ್ಯವೂ ಒಂದಲ್ಲ ಒಂದು ರೀತಿಯಲ್ಲಿ ಸಂಭವಿಸಿ ಅನುಭವಕ್ಕೂ ಬಾರದಿರದು. ಆ ಪ್ರಸಂಗಗಳನ್ನು ಹೇಗೆ ಸ್ವೀಕರಿಸಿ ತನ್ನ ಮನಶ್ಶುದ್ಧಿಯನ್ನು ಕಲ್ಪಿಸಿಕೊಳ್ಳಬೇಕೆಂಬ ರಹಸ್ಯವನ್ನು ದಾಸರು ಬಿಚ್ಚಿಟ್ಟಿರುವರು. ಇದು ಲೋಕನೀತಿಯೂ ಆಗಿದೆ. ಆಧ್ಯಾತ್ಮ ಚಿಂತನೆಯೂ ಆಗಿದೆ. ಇಂತಹ ಸಂದೇಶವಿತ್ತ ಶ್ರೀಪುರಂದರದಾಸರಿಗೆ ಎಲ್ಲ ಸಜ್ಜನರೂ ಋಣಿಗಳಲ್ಲದೆ ಮತ್ತೇನು.

ಲೇಖಕರು: Dr. A. B. ಶಾಮಾಚಾರ್, ಬೆಂಗಳೂರು. ಲೇಖಕರ ಅನುಮಾನತಿಯೊಂದಿಗೆ.

ಶ್ರೀ ಕೃಷ್ಣಾರ್ಪಣಮಸ್ತು